ಮೀನುಗಾರಿಕೆಗೆ ಉತ್ತೇಜನ

448 (198) ಶ್ರೀ ಮಂಜು ಎ. (ಅರಕಲಗೂಡು):– ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೀನುಗಾರಿಕೆ ಉತ್ತೇಜಿಸಲು ಅರಕಲಗೂಡು ಮತ ಕ್ಷೇತ್ರಕ್ಕೆ ಇಲಾಖೆಯಿಂದ ಎಷ್ಟು ಹಣವನ್ನು ಬಿಡುಗಡೆಗೊಳಿಸಲಾಗಿದೆ ;

ಆ) ಯಾವ ಯಾವ ಯೋಜನೆಗಳಿಗೆ ಈ ಹಣ ವಿನಿಯೋಗಿಸಲಾಗಿದೆ (2008–09 ಮತ್ತು 2009–10ರ ಸಾಲಿನ ವಿವರ ನೀಡುವುದು)?

ಶ್ರೀ ಆನಂದ ವಸಂತ ಆಸ್ನೋಟಿಕರ್ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):–

ಅ) ಮೀನುಗಾರಿಕೆ ಉತ್ತೇಜಿಸಲು ಅರಕಲಗೂಡು ಮತಕ್ಷೇತ್ರಕ್ಕೆ 2008–09ನೇ ಸಾಲಿನಲ್ಲಿ ರೂ. 3,14,803 ಮತ್ತು 2009–10ನೇ ಸಾಲಿನಲ್ಲಿ ರೂ. 96,452–00 ಗಳನ್ನು ಬಿಡುಗಡೆಗೊಳಿಸಲಾಗಿದೆ.

ಆ) 2008–09 ಮತ್ತು 2009–10ನೇ ಸಾಲುಗಳಲ್ಲಿ ಹಣ ವಿನಿಯೋಗಿಸಿರುವ ಯೋಜನೆಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಮಂಜು ಎ. (ಅರಕಲಗೂಡು)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 198ರ

ಅನುಬಂಧ

ಕ್ರಮ ಸಂಖ್ಯೆ	ಯೋಜನೆ	2008–09ನೇ ಸಾಲಿನಲ್ಲಿ ವಿನಿಯೋಗಿಸಿರುವ ಹಣ ರೂ.ಗಳಲ್ಲಿ	2009–10ನೇ ಸಾಲಿನಲ್ಲಿ ವಿನಿಯೋಗಿಸಿರುವ ಹಣ ರೂ.ಗಳಲ್ಲಿ
1	ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ	19,194–00	–
2	ಮೀನುಮರಿ, ಉತ್ಪಾದನೆ, ಪಾಲನೆ ಮತ್ತು ಹಂಚಿಕೆ	41,536–00	49,298–00
3.	ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ	6250–00	8,000–00

4.	ವಿಶೇಷ ಘಟಕ ಯೋಜನೆಯಡಿ ನದಿ ಮೀನುಗಾರಿಕೆಗೆ ಸಲಕರಣೆ ಖರೀದಿಗೆ ಸಹಾಯ	24,000–00	–
5.	ಕೇಂದ್ರ ಪುರಸ್ಕೃತ ವಿದರ್ಭ ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ	2,23,823–00	–
6.	ವಿಶೇಷ ಘಟಕ ಯೋಜನೆ	–	25,000–00
7.	ಗಿರಿಜನ ಉಪ ಯೋಜನೆ	–	5,000–00
8.	ಮೀನುಮರಿ ಖರೀದಿಗೆ ಸಹಾಯಧನ	–	9,154–00
	ಒಟ್ಟು	3,14,803	96,452–00

ಸರ್ವ ಶಿಕ್ಷಣ ಅಭಿಯಾನ

449 (682) ಶ್ರೀ ಮುನಿರಾಜು ಎಸ್. (ದಾಸರಹಳ್ಳಿ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾಗಿರುವ ಶಾಲೆಗಳೆಷ್ಟು (ವಿವರ ನೀಡುವುದು) ;

ಆ) ಈ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ತಗುಲಿದ ಒಟ್ಟು ವೆಚ್ಚವೆಷ್ಟು (ಮಾಹಿತಿ ನೀಡುವುದು) ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಈ ಕೆಳಕಾಣಿಸಿರುವ 4 ಹೊಸ ಶಾಲೆಗಳು ಮಂಜೂರಾಗಿರುತ್ತವೆ.

2006–07ನೇ ಸಾಲಿನಲ್ಲಿ ತೆರೆದಿರುವ ಹೊಸ ಶಾಲೆಗಳು	*ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿರುವ ಅನುದಾನ ವೆಚ್ಚ*
1. ಸ.ಕಿ.ಪ್ರಾ.ಶಾಲೆ, ನಾಗಸಂದ್ರ ಕಾಲೋನಿ	ರೂ. 9.00 ಲಕ್ಷಗಳು
2. ಸ.ಕಿ.ಪ್ರಾ.ಶಾಲೆ, ಶುಶೃತಿನಗರ	ರೂ. 4.25 ಲಕ್ಷಗಳು
3. ಸ.ಕಿ.ಪ್ರಾ.ಶಾಲೆ, ಅಬ್ಬಿಗೆರೆ ಕಾಲೋನಿ	ರೂ. 4.25 ಲಕ್ಷಗಳು